ಊ) ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ ಕಾಮಗಾರಿಯು ಪ್ರಗತಿಯಲ್ಲಿದೆ.

ಆ) ಪರಿಷ್ಕೃತ ಅಂದಾಜು ವೆಚ್ಚ ರೂ. 88.99 ಲಕ್ಷಗಳು.

ಇ) ರೂ. 54.20 ಲಕ್ಷಗಳು.

ಈ) ರೂ.33.99 ಲಕ್ಷಗಳು.

ಉ) ಸದರಿ ಆಸ್ಪತ್ರೆಯನ್ನು 2005–2006ನೇ ಸಾಲಿನಿಂದ ರಾಜ್ಯವಲಯದಿಂದ ಜಿಲ್ಲಾ ವಲಯಕ್ಕೆ ವರ್ಗಾಯಿಸಿದ್ದು, 2005–2006ನೇ ಸಾಲಿಗೆ ಲೆಕ್ಕಶೀರ್ಷಿಕೆ 2210–04–101–1–76 ಯೋಜನೆಯಡಿ ಶಿವಮೊಗ್ಗ ಜಿಲ್ಲಾ ಪಂಚಾಯಿತಿಗೆ ರೂ.10.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಶೀಘ್ರವಾಗಿ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

2483(1868) ಶ್ರೀ ಗೋಪಾಲಕೃಷ್ಣ ಎನ್.ವೈ. (ಮೊಳಕಾಲ್ಮೂರು):–ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಕೊಳಚೆ ಪ್ರದೇಶಗಳು ಯಾವುವು (ಕೊಳಚೆ ಪ್ರದೇಶವಾರು ವಿವರಗಳನ್ನು ಒದಗಿಸುವುದು);

ಆ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಿಂದ ಬಿಡುಗಡೆ ಮಾಡಿರುವ ಹಣವೆಷ್ಟು; (ಕೊಳಚೆ ಪ್ರದೇಶವಾರು ವಿವರಗಳನ್ನು ಒದಗಿಸುವುದು)

ಇ) ಈ ಹಣವನ್ನು ಯಾವ ಯಾವ ಕೊಳಚೆ ಪ್ರದೇಶಗಳಿಗೆ ಯಾವ ಯಾವ ಬಾಬ್ತುಗಳಿಗಾಗಿ ವೆಚ್ಚ ಮಾಡಲಾಗಿದೆ (ವಿವರಗಳನ್ನು ಒದಗಿಸುವುದು)?

ಶ್ರೀ ಅಂಜನಮೂರ್ತಿ (ವಸತಿ ಸಚಿವರು):

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬೋವಿ ಕಾಲೋನಿ ಕೊಳಚೆ ಪ್ರದೇಶವನ್ನು ಮೊಳಕಾಲ್ಮೂರು ಪುರಸಭಾ ವ್ಯಾಪ್ತಿಯಲ್ಲಿ ಮಂಡಳಿಯ ಕಾಯ್ದೆಯಡಿ ಘೋಷಿಸಲಾಗಿದೆ.

ಆ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿರುವ ಹಣ ರೂ.6.00 ಲಕ್ಷ.

ಇ) ಈ ಹಣದಲ್ಲಿ 10 ಸೀಟರಿನ ಸಮುದಾಯ ಶೌಚಾಲಯವನ್ನು ನಿರ್ಮಲ್ ಭಾರತ್ ಅಭಿಯಾನ್ ಯೋಜನೆಯಡಿ ರೂ. 4.00 (ವಾಂಬೆ ಸಹಾಯಧನ ಯೋಜನೆಯಡಿ) ಲಕ್ಷಗಳಲ್ಲಿ ನಿರ್ಮಿಸಲು ಮತ್ತು ರೂ. 1.79 ಲಕ್ಷಗಳ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಿಸಲಾಗಿದೆ.

2488(3371) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):–ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿದೆಯೇ;

ಆ) ಬಂದಿದ್ದಲ್ಲಿ, ಕುಂದಾಪುರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು;

ಇ) 2005–2006ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಈ ಕಾಲೇಜು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿ, ಬಡ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣದಿಂದ ವಂಚಿತರಾಗುವಂತೆ ಕ್ರಮಕೈಗೊಳ್ಳುವುದೇ?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಸ್ಥಳ ಪರಿಶೀಲನಾ ವರದಿಯನ್ನು ಕಳುಹಿಸಿಕೊಡಲು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ಇವರಿಗೆ ಸೂಚಿಸಲಾಗಿದೆ.

ಇ) 2005–06ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲು ಅವಶ್ಯಕತೆ, ಮೂಲಭೂತ ಸೌಕರ್ಯಗಳ ಲಭ್ಯತೆ ಹಾಗೂ ಇಲಾಖೆಯ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

2485(3372) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕೇಂದ್ರಗಳಲ್ಲಿರುವ ಸರ್ಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒದಗಿಸಲಾದ ಅಂಬುಲೇನ್ಸ್‌ಗಳಲ್ಲಿ ಶವಗಳನ್ನು ಕೊಂಡೊಯ್ಯ ಬಾರದೆಂದು ಸರ್ಕಾರ ಆದೇಶ ನೀಡಿದೆಯೇ;

ಆ) ಇದರಿಂದಾಗಿ ಬಡವರಿಗೆ ಮೃತಪಟ್ಟ ಶವಗಳನ್ನು ಕೊಂಡೊಯ್ಯಲು ತೊಂದರೆಯಾಗುವುದು ನಿಜವಲ್ಲವೇ;

ಇ) ಹಾಗಿದ್ದರೆ ಮೃತ ಶವಗಳನ್ನು ಅಂಬುಲೆನ್ಸ್‌ಗಳಲ್ಲಿ ಕೊಂಡೊಯ್ಯಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರಿ ಆಸ್ಪತ್ರೆಯಲ್ಲಿ ಆಂಬುಲೆನ್ಸ್‌ನ್ನು ಕೇವಲ ತುರ್ತು ಚಿಕಿತ್ಸೆ ಮತ್ತು ಬೇರೆ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ರೋಗಿಗಳನ್ನು ಸಾಗಿಸಬೇಕಾದ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಲಾಗುತ್ತಿದೆ. ಶವಗಳನ್ನು ಸಾಗಿಸಲು ಬಳಸುತ್ತಿಲ್ಲ. ವೈದ್ಯಕೀಯ ನೀತಿ ಸಂಹಿತೆಯ ಪ್ರಕಾರ ಇದು ನಿಷೇದ.